# ಪುರಸಭೆ, ಪುತ್ತೂರು

## ಮಾಹಿತಿ ಪತ್ರ

ಸರ್ವೋಚ್ಚ ನ್ಯಾಯಾಲಯದಲ್ಲಿ ಅಲ್‌ಮಿತ್ರ ಹೆಚ್. ಪಟೇಲ್ ಎಂಬುವರು ಡಬ್ಲ್ಯೂ. ಪಿ. ಸಿವಿಲ್ ನಂ. 888/1996ರಂತೆ ನಗರ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಲ್ಲಿ ಘನ ತ್ಯಾಜ್ಯ ವಸ್ತುಗಳ ಸಮರ್ಪಕ ವಿಲೇವಾರಿಯ ಬಗ್ಗೆ ಸೂಕ್ತ ನಿರ್ದೇಶನ ಕೋರಿ ಸಾರ್ವಜನಿಕ ಹಿತಾಸಕ್ತಿ ದಾವೆಯನ್ನು ದಾಖಲಿಸಿದ್ದು, ಸರ್ವೋಚ್ಚ ನ್ಯಾಯಾಲಯವು ಈ ಬಗ್ಗೆ ದೇಶದ ಸ್ಥಳೀಯ ಸಂಸ್ಥೆಗಳು ಘನ ತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ಯಾವ ರೀತಿ ಏರ್ಪಡಿಸಬಹುದು ಎಂಬ ಬಗ್ಗೆ ಅಧ್ಯಯನ ಮಾಡಿ ವರದಿಯನ್ನು ಸಲ್ಲಿಸಲು ಉಚ್ಚ ಮಟ್ಟದ ಒಂದು ಸಮಿತಿಯನ್ನು ನೇಮಿಸಿ ಸದ್ರಿ ಸಮಿತಿಯು ಸಲ್ಲಿಸಿದ ವರದಿಯಲ್ಲಿ ನೀಡಿದ ಶಿಫಾರಸ್ಸುಗಳನ್ನು ಅಂಗೀಕರಿಸಿ ಸೂಕ್ತ ನಿರ್ದೇಶನ ನೀಡಿದ ಪ್ರಕಾರ ಕೇಂದ್ರ ಸರಕಾರದ ಘನ ತ್ಯಾಜ್ಯ ವಸ್ತುಗಳ ನಿಯಮಗಳು 2000 ಎಂಬ ನಿಯಮಾವಳಿಯನ್ನು ಎಲ್ಲಾ ರಾಜ್ಯಗಳಿಗೂ ಅನ್ವಯವಾಗುವಂತೆ ಜಾರಿಗೊಳಿಸಿದ್ದು ಈ ನಿಯಮಗಳಂತೆ ಘನ ತ್ಯಾಜ್ಯ ವಸ್ತುಗಳನ್ನು ಯಾರು ಉತ್ಪಾದಿಸುತ್ತಾರೋ ಅವರೇ ಸಮರ್ಪಕ ನಿರ್ವಹಣೆಯ ಜವಾಬ್ದಾರಿಯನ್ನು ಹೊರತಕ್ಕದ್ದು, ಅಲ್ಲದೆ ಸಂಬಂಧ ಪಟ್ಟ ಪುರಸಭೆಗಳ ಮೇಲ್ಕಾಣಿಸಿದ ನಿಯಮಾವಳಿಯಲ್ಲಿ ಕಾಣಿಸಿರುವಂತೆ ಘನ ತ್ಯಾಜ್ಯ ಸಂಗ್ರಹ ಹಾಗೂ ನಿರ್ವಹಣೆ ಬಗ್ಗೆ ವ್ಯವಸ್ಥೆ ಮಾಡತಕ್ಕದ್ದು ಎಂದು ವಿಧಿಸಿರುತ್ತಾರೆ.

ತ್ಯಾಜ್ಯ ವಸ್ತುಗಳನ್ನು ಎಲ್ಲೆಂದರಲ್ಲಿ ಎಸೆಯುವುದರಿಂದ ಪರಿಸರ ಮಾಲಿನ್ಯಗೊಂಡು ನೊಣ, ಸೊಳ್ಳೆಗಳು ಉತ್ಪತ್ತಿಯಾಗಿ ಸಾಂಕ್ರಾಮಿಕ ರೋಗಗಳು ಹರಡಿ ಸಾರ್ವಜನಿಕ ಆರೋಗ್ಯಕ್ಕೆ ತೊಂದರೆಯಾಗುವ ಸಾಧ್ಯತೆಯಿರುತ್ತದೆ. ಅಲ್ಲದೆ ಕರ್ನಾಟಕ ಪುರಸಭೆ ಕಾಯ್ದೆ 1964ರ ಪ್ರಕರಣ 224, 228ರಂತೆಯೂ ಘನ ತ್ಯಾಜ್ಯ ವಸ್ತುಗಳ ಸಮರ್ಪಕ ನಿರ್ವಹಣೆ ಮಾಡುವುದು ಪ್ರತಿಯೊಬ್ಬ ನಾಗರೀಕನೂ ಪುರಸಭೆಯೊಂದಿಗೆ ಸಹಕರಿಸುವುದು ಅಗತ್ಯವಿರುತ್ತದೆ.

ಈ ಹಿನ್ನಲೆಯಲ್ಲಿ ಪುರಸಭಾ ವ್ಯಾಪ್ತಿಯ ದರ್ಬೆ ವೃತ್ತದಿಂದ ನೆಹರೂನಗರ ವೃತ್ತದ ವರೆಗಿನ ಮುಖ್ಯ ರಸ್ತೆಯ ಆಸುಪಾಸಿನ ರಸ್ತೆ, ಕೋರ್ಟು ರಸ್ತೆ, ಎಂ. ಟಿ. ರಸ್ತೆಯ ಎಲ್ಲಾ ಮನೆ, ಉದ್ದಿಮೆ, ವ್ಯಾಪಾರಿ ಮಳಿಗೆ ಇತ್ಯಾದಿಗಳಲ್ಲಿ ಉತ್ಪತ್ತಿಯಾದ ಕಸವನ್ನು ಮನೆ, ಮನೆ ತ್ಯಾಜ್ಯ ಸಂಗ್ರಹದ ಮೂಲಕ ವಿಲೇ ಮಾಡಲು ಸ್ವಸಹಾಯ ಸಂಘದವರಿಗೆ ಕಾರ್ಯಾದೇಶ ನೀಡಿದ್ದು, ತ್ಯಾಜ್ಯ ಸಂಗ್ರಹಗಾರರು ತಮ್ಮ ಬಳಿಗೆ ಬಂದಾಗ ತಮ್ಮಲ್ಲಿ ಉತ್ಪತ್ತಿಯಾದ ಕಸವನ್ನು ಪ್ರತ್ಯೇಕಿಸಿ ಅವರಲ್ಲಿ ಕೊಟ್ಟು ಪರಿಸರವನ್ನು ಶುಚಿಯಾಗಿಡಲು ಸಹಕರಿಸಬೇಕಾಗಿ ಕೋರಲಾಗಿದೆ. ಅಲ್ಲದೆ ಈ ತ್ಯಾಜ್ಯ ಸಂಗ್ರಹದ ಬಗ್ಗೆ ಸೇವಾ ಶುಲ್ಕವನ್ನು ಪುರಸಬೆ ಪ್ರತಿ ಮನೆ, ಉದ್ದಿಮೆ, ವ್ಯಾಪಾರಿ ಮಳಿಗೆಗಳಿಗೂ ನಿಗದಿಪಡಿಸಿದ್ದು, ತಮ್ಮ ಬಳಿಗೆ ಬರುವ ಸ್ವಸಹಾಯ ಸಂಘದ ಸದಸ್ಯರಿಗೆ ಸೂಕ್ತ ಶುಲ್ಕವನ್ನು ನೀಡಿ ಸಹಕರಿಸಬೇಕಾಗಿ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಪುರಸಭೆಯ ಆರೋಗ್ಯ ವಿಭಾಗವನ್ನು ಸಂಪರ್ಕಿಸಬಹುದು.

**ಆರೋಗ್ಯವೇ ಭಾಗ್ಯ**

**ಮುಖ್ಯಾಧಿಕಾರಿ**
ಪುರಸಭೆ, ಪುತ್ತೂರು